ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೆ SWACHHA MEVA JAYATE | ಜಲೋತ್ಸವ | ಮನೆ ಮನೆಗೆ ಗಂಗೆ ಜಲ ಜೀವನ ಮಿಷನ್

# ಅರಳಿಗನೂರು ಗ್ರಾಮದ ಕುಡಿಯುವ ನೀರಿನ ಬರ ನೀಗಿಸಿದ ಜಲ ಜೀವನ್ ಮಿಷನ್



ಗ್ರಾಮೀಣ ಭಾಗದ ಎಲ್ಲಾ ಮನೆಗಳಿಗೆ ಕಾರ್ಯಾತ್ಮಕ ಗೃಹ ನಳ ಸಂಪರ್ಕ ಮೂಲಕ ಪ್ರತಿಯೊಬ್ಬರಿಗೂ ಶುದ್ಧ, ಸುರಕ್ಷಿತ ನೀರು ಒದಗಿಸುವ ಮಹತ್ವದ ಯೋಜನೆಯೆ ಜಲ ಜೀವನ್ ಮಿಷನ್. ಈ ಯೋಜನೆ ಯಿಂದ ಪ್ರಸ್ತುತ ಬಳ್ಳಾರಿ ಜಿಲ್ಲೆ, ಸಿರಿಗುಪ್ಪ ತಾಲೂಕು, ಉಪ್ಪಾರ ಹೊಸಹಳ್ಳಿ ಗ್ರಾಮ ಪಂಚಾಯಿತಿಯ ಅರಳಿಗನೂರು ಗ್ರಾಮದ ಜನರು ಎದುರಿಸುತ್ತಿದ್ದ ನೀರಿನ ಬರವನ್ನು ನೀಗಿಸಿದೆ.

ಅರಳಿಗನೂರು ಗ್ರಾಮದಲ್ಲಿ ಸುಮಾರು 200 ಕುಟುಂಬಗಳಷ್ಟೆ ನಳ ಸಂಪರ್ಕವನ್ನು ಹೊಂದಿದ್ದವು. ಇನ್ನುಳಿದ 350 ಕುಟುಂಬಗಳು ನೀರಿಗಾಗಿ ಪ್ರತಿದಿನ ಪರದಾಡುತ್ತಿದ್ದರು. ದಿನನಿತ್ಯ ಬಳಕೆ ಹಾಗೂ ಕುಡಿಯುವುದಕ್ಕಾಗಿ ಊರಲ್ಲಿದ್ದ 3 ಕೊಳವೆ ಬಾವಿಗಳನ್ನೆ ಅವಲಂಬಿಸಿದ್ದರು. ಇದೀಗ ಈ ಯೋಜನೆಯ ಉದ್ದೇಶದಂತೆ ಗ್ರಾಮದಲ್ಲಿರುವ ಮತ್ತು ವಲಸೆ ಹೋಗಿರುವ ಎಲ್ಲಾ ಕುಟುಂಬಗಳಿಗೆ ಸಹ ಕಾರ್ಯಾತ್ಮಕ ನಳ ಸಂಪರ್ಕ ಕಲ್ಪಿಸಿರುವುದರಿಂದ ಗ್ರಾಮೀಣ ಭಾಗದ ಜನರ ಬದುಕಲ್ಲಿ ಸಂತಸ ತಂದಿದೆ.



ಮೊದಲ ಹಂತದಲ್ಲಿ ಗ್ರಾಮಗಳಲ್ಲಿ ಕಾರ್ಯಾತ್ಮಕ ನಳ ಸಂಪರ್ಕ ಒದಗಿಸುವುದು ದೊಡ್ಡ ಸವಾಲಾಗಿತ್ತು. ಮೀಟರ್ ಅಳವಡಿಕೆಯಿಂದ ನೀರಿನ ತೆರಿಗೆ ಜಾಸ್ತಿ ಆಗುತ್ತದೆ ಎಂಬ ಅಭಿಪ್ರಾಯ ಗ್ರಾಮದ ಜನರಲ್ಲಿ ಇತ್ತು. ಆದರೆ ವಿಶೇಷ ಗ್ರಾಮಸಭೆಗಳ ಮೂಲಕ ಮೀಟರ್ ಮತ್ತು ಪ್ರೆಷರ್ ಕಂಟ್ರೋಲ್, ವಾಲ್ವ್‌ಗಳ ಅಳವಡಿಕೆಯ ಉದ್ದೇಶದ ಬಗ್ಗೆ ಗ್ರಾಮಸ್ಥರಿಗೆ ತಿಳಿಸಲಾಯಿತು. ಹಾಗೂ ಅನುಷ್ಠಾನ ಸಂಸ್ಥೆಗಳ ಮೂಲಕ ವಿವಿಧ ಮಾಹಿತಿ ಶಿಕ್ಷಣ ಮತ್ತು ಸಂವಹನ ಮೂಲಕ ನೀರು ಮತ್ತು ನೈರ್ಮಲ್ಯದ ಕುರಿತು ಜಾಗೃತಿ ಮೂಡಿಸಲಾಗಿದೆ.

ಜಲ ಜೀವನ್ ಮಿಷನ್ ಯೋಜನೆಯ ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ರಚನೆ ಮಾಡಲಾಗಿದ್ದು ಸದರಿ ಮಹಿಳಾ ಸದಸ್ಯರಿಗೆ ಕ್ಷೇತ್ರ ಪರೀಕ್ಷಾ ಕಿಟ್ ಮೂಲಕ ನೀರಿನ ಪರೀಕ್ಷೆ ಮಾಡುವ ತರಬೇತಿ ನೀಡಲಾಗಿದೆ. ಆಶಾ, ಅಂಗನವಾಡಿ ಕಾರ್ಯಕರ್ತೆಯರು ನೀರಿನ ಪರೀಕ್ಷೆ ಮಾಡಿ, ಗ್ರಾಮಸ್ಥರಿಗೆ ಮಾಹಿತಿ ನೀಡುತ್ತಿದ್ದಾರೆ. ಗ್ರಾಮದ ಸ್ತ್ರೀ ಶಕ್ತಿ ಸಂಘದಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಸುಜಾತ ಮತ್ತು ಶ್ರೀಮತಿ ನಾಗರತ್ನ ಅವರು ಕಾರ್ಯಾತ್ಮಕ ನಳ ಸಂಪರ್ಕದಿಂದಾದ ಪ್ರಯೋಜನವನ್ನು ತಿಳಿಸಿ ಸಂತಸ ವ್ಯಕ್ತಪಡಿಸಿದ್ದಾರೆ.




"ಈ ಮುಂಚೆ ನಾವು ಬೋರ್ವೆಲ್ ನೀರನ್ನು ಕುಡಿಯುತ್ತಿದ್ದೆವು, ಜಲ ಜೀವನ್ ಮಿಷನ್ ಯೋಜನೆಯಡಿ, ಕಾರ್ಯಾತ್ಮಕ ನಳ ಸಂಪರ್ಕ ಕಾಮಾಗಾರಿ ಆದನಂತರ, ಇದೀಗ ಶುದ್ದ ನೀರು ನಲ್ಲಿಯಲ್ಲಿ ಸರಬರಾಜು ಆಗುತ್ತಿದೆ. ಹಾಗೂ ನಾವು ಕ್ಷೇತ್ರ ಪರೀಕ್ಷಾ ಕಿಟ್ ಮೂಲಕ ನೀರಿನ ಪರೀಕ್ಷೆಯನ್ನು ಮಾಡಲು ಕಲಿತಿದ್ದು, ನಮ್ಮ ಗ್ರಾಮ ಪಂಚಾಯಿತಿಯಲ್ಲಿರುವ ಕ್ಷೇತ್ರ ಪರೀಕ್ಷಾ ಕಿಟ್ ಮೂಲಕ ನೀರಿನ ಪರೀಕ್ಷೆಯನ್ನು ಮಾಡುತ್ತೇವೆ. ಈಗ ನಮ್ಮ ಮನೆಗೆ ಸಮಯಕ್ಕೆ ಸರಿಯಾಗಿ ಶುದ್ದ ನೀರು ಬರುವುದರಿಂದ, ನೀರಿಗಾಗಿ ಕಾಯುವ ಸಮಯವು ಕಡಿಮೆಯಾಗಿದೆ ಹಾಗೂ ನಾವುಗಳು ಟೈಲರಿಂಗ್ ತರಬೇತಿಯನ್ನು ಪಡೆದಿರುವುದರಿಂದ ಮನೆಯಲ್ಲಿಯೇ ಟೈಲರಿಂಗ್ ವೃತ್ತಿಯನ್ನು ಮಾಡಿ, ಜೀವನೋಪಾಯ ಚಟುವಟಿಕೆಯನ್ನು ಅಳವಡಿಸಿಕೊಂಡಿದ್ದೇವೆ" ಎಂದು ತಿಳಿಸಿ, ಸಂತೋಷಪಟ್ಟರು.

ಮನೆ ಮನೆ ಗೆ ನಳ ಸಂಪರ್ಕ ದಿಂದ ಗ್ರಾಮದ ನೀರುಗಂಟಿ ಕೂಡ ಖುಷಿಯಾಗಿದ್ದಾರೆ. ಪದೇ ಪದೇ ಬೋರ್ ವೆಲ್ ರಿಪೇರಿ ಮಾಡುವುದರಿಂದ ನೀರಿನ ಸಮಸ್ಯೆಯು ಕಾಡುತ್ತಿತ್ತು ಈಗ ಈ ಸಮಸ್ಯೆ ಕಡಿಮೆಯಾಗಿದ್ದು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದೇವೆ ಎಂದು ಅಭಿಪ್ರಾಯ ಹಂಚಿಕೊಂಡಿದ್ದಾರೆ. ಒಟ್ಟಿನಲ್ಲಿ ಜಲ ಜೀವನ್ ಮಿಷನ್ ಯೋಜನೆ ಮೂಲಕ ಮನೆ ಮನೆಗೆ ನಳ ಸಂಪರ್ಕ ದೊರೆತಿರುವುದರಿಂದ ಗ್ರಾಮದ ಎಲ್ಲಾ ಕುಟುಂಬಗಳಿಗೆ ನೀರಿನ ಚಿಂತೆಯಿಂದ ಮುಕ್ತಿ ಸಿಕ್ಕಿದೆ ಹಾಗೂ ಶುದ್ದ ಕುಡಿಯುವ ನೀರಿನ ಹಕ್ಕು ಮನೆ ಮನೆಗೂ ತಲುಪಿದೆ.

**ನೀರು ಮತ್ತು ನೈರ್ಮಲ್ಯ ಕುರಿತ ಸಮಸ್ಯೆಗಳಿಗೆ**
**ಪರಿಹಾರ ಸಹಾಯವಾಣಿ 9480985555 ಗೆ ಕರೆ ಮಾಡಿ**